# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 17-3-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಭಾರತೀಯ ಬಂದರುಗಳಲ್ಲಿ ಖಾದ್ಯತೈಲ ಆಮದು ದಾಸ್ತಾನು ಇಳಿಕೆ

ಭಾರತದ ಫೆಬ್ರವರಿ ತಿಂಗಳ ಪಾಮೆಣ್ಣೆ ಖರೀದಿ 22 ಶೇಕಡಾ ಹೆಚ್ಚಳವಾಗಿ 454,794 ಟನ್ ಗಳಾಗಿವೆಯೆನ್ನಲಾಗಿದೆ. ಮಾರ್ಚ 14 ರಲ್ಲಿ ಭಾರತದ ಬಂದರುಗಳಲ್ಲಿ ಖಾದ್ಯ ತೈಲ ದಾಸ್ತಾನು 2021 ಮೇ ತಿಂಗಳ ನಂತರ ಕನಿಷ್ಠ ಮಟ್ಟಕ್ಕಿಳಿದಿದೆಯೆಂದು ಸಾಲ್ವೆಂಟ್ ಎಕ್ಸ್ ಟ್ರಾಕ್ಟರ್ಸ್ ಅಸೋಸಿಯೇಶನ್ ಹೇಳಿದೆ. ಆಮದಿತ ಖಾದ್ಯತೈಲ ಪೂರೈಕೆ ಮುಂದೆ ಕೆಲವು ಸಮಯದ ತನಕ ಬಿಗುವಿನಿಂದಿರುವ ಸಾಧ್ಯತೆಯಿದೆ.

## ನೈಜೀರಿಯಾದಲ್ಲಿ ದಾಖಲೆ ಜೋಳ ಉತ್ಪಾದನೆ, ರಫ್ತು ನಿರ್ಬಂಧಕ್ಕೆ ಬೇಡಿಕೆ

ನೈಜೀರಿಯಾದಲ್ಲಿ ಸ್ವಾತಂತ್ರ್ಯ ನಂತರ ವರ್ಷಗಳಲ್ಲಿ ಈ ವರ್ಷ ಅತಿ ಹೆಚ್ಚು ಜೋಳ ಉತ್ಪಾದಿಸಲಾಗಿದೆಯೆನ್ನಲಾಗಿದೆ. ಹಿಂದೊಮ್ಮೆ ಜೋಳ ದರ ಅತಿ ಹೆಚ್ಚಳವಾದಾಗ ಅಲ್ಲಿ ರಫ್ತು ನಿಷೇದಿಸಲಾಗಿತ್ತು. ಈಗ ಮತ್ತೆ ರಷ್ಯಾ, ಉಕ್ರೈನ್ ಯುದ್ಧದಿಂದ ಜೋಳಕ್ಕೆ ಜಾಗತಿಕ ಬೇಡಿಕೆ ಹೆಚ್ಚಾಗಿರುವ ಹಿನ್ನಲೆಯಲ್ಲಿ ಹಿಂತೆಗೆಯಲಾಗಿದ್ದ ರಫ್ತು ನಿಷೇಧವನ್ನು ಮತ್ತೆ ಹೇರಬೇಕೆಂದು ಆ ರಾಷ್ಟ್ರದಲ್ಲಿ ಬೇಡಿಕೆಯಾಗಿದೆಯೆನ್ನಲಾಗಿದ್ದು, ಅಲ್ಲಿಂದಲೂ ಜಾಗತಿಕ ಮಾರುಕಟ್ಟೆಗೆ ಜೋಳ ಲಭ್ಯವಾಗದಿರುವುದರಿಂದ, ಜಾಗತಿಕ ಜೋಳ ದರ ಮತ್ತೂ ಹೆಚ್ಚಳವಾಗುವ ಸಾಧ್ಯತೆಯಿದೆ.

## ಸೋಯಬೀನ್ ಮೀಲ್ ದರ ಹೆಚ್ಚಳ, ಪಶು ಆಹಾರ, ಫೀಡ್ಸ್ ದರ ಹೆಚ್ಚಳ

ಜಾಗತಿಕ ಸೋಯಮೀಲ್ ದರ ನಿರಂತರ ಹೆಚ್ಚಳದಲ್ಲಿದ್ದು, ರಫ್ತು ದೇಶವಾದ ಅರ್ಜೆಂಟಿನಾ ಸಧ್ಯ ಸೋಯಮೀಲ್ ರಫ್ತು ನಿಲ್ಲಿಸುವುದರಿಂದ ಜಾಗತಿಕ ದರ ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆ. ಪಶು, ಪಕ್ಷಿ ಆಹಾರ ಫೀಡ್ಸ್ ದರಗಳು ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆ.

## ಮಲೇಶ್ಯನ್ ಪಾಮೆಣ್ಣೆ ದರ ಮತ್ತೆ ಹೆಚ್ಚಳ

ಸತತ ನಾಲ್ಕು ದಿನ ಇಳಿಕೆ ಕಂಡಿದ್ದ ಮಲೇಶ್ಯನ್ ಪಾಮೆಣ್ಣೆ ದರ ಮಾರ್ಚ ಪ್ರಥಮಾರ್ಧದ ರಫ್ತು ಹೆಚ್ಚಳದಿಂದ ಮತ್ತೆ ಏರಿಕೆಯಾಗಿದೆ. ಮಲೇಶ್ಯನ್ ಪಾಮೆಣ್ಣೆ ರಫ್ತು ಮಾರ್ಚ 1–15 ರ ಅವಧಿಯಲ್ಲಿ 13–15 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ.